5. ವಾರಕ್ಕೆ ಎರಡು ದಿನ ಸಭೆ ರಹಿತ ದಿನಗಳನ್ನು ಪಾಲಿಸುವುದು.
6. ಸಾರ್ವಜನಿಕರಿಗೆ ಸಂದರ್ಶನಕ್ಕೆ ಅವಕಾಶ ಕೊಡುವುದು.
7. ತನಿಖೆಗಳನ್ನು ನಡೆಸುವುದು.
8. ಜಿಲ್ಲೆಗಳಲ್ಲಿ ಕಾರ್ಯದರ್ಶಿಗಳು ಪ್ರವಾಸ ಮಾಡುವುದು.
9. ಪೀಠಾಧಿಕಾರಿ ಪದ್ಧತಿ ಜಾರಿಗೆ ತರುವುದು.
10. ಪ್ರತಿ ತಿಂಗಳೂ ಇಲಾಖೆಗಳಲ್ಲಿನ ಕಡತ ಬಾಕಿ ಸಮೀಕ್ಷೆ
11. ಇಲಾಖಾ ಮುಖ್ಯಸ್ಥರ ಕಛೇರಿಗಳ ಮಾಸಿಕ ಬಾಕಿ ಪಟ್ಟಿಯ ಸಮೀಕ್ಷೆ ಹಾಗೂ ಪ್ರವಾಸ ವರದಿಗಳ ಸಮೀಕ್ಷೆಯನ್ನು ಮಾಡುವುದು.
12. ಸಚಿವಾಲಯದ ಇಲಾಖಾ ಕಾರ್ಯದರ್ಶಿಗಳ ಸಭೆ ನಡೆಸುವುದು.
13. ಕುಂದುಕೊರತೆಗಳ ನಿವಾರಣಾ ಕೌಂಟರ್‌ಗಳನ್ನು ಕಛೇರಿಗಳಲ್ಲಿ ತೆರೆಯುವುದು.
11. ದಕ್ಷತೆ, ಪರಿಶೋಧನೆ ಮತ್ತು ಜಾಗೃತಿ ವಿಭಾಗದ ರಚನೆ.

ಬೆಳಗಾವಿ ಅಭಿವೃದ್ಧಿಯ ಬಗ್ಗೆ ಕ್ರಮ

2614 - ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕದ ಬೆಳಗಾವಿ ನಗರದ ಸಮಗ್ರ ಅಭಿವೃದ್ಧಿಯ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಆ) ನಗರವನ್ನು ಅಭಿವೃದ್ಧಿಪಡಿಸಬೇಕೆಂದು ಅಲ್ಲಿನ ಮಹಾನಗರ ಪಾಲಿಕೆಯ ಮಹಾಪೌರರು ಹಾಗೂ ಇತರರು ಸರ್ಕಾರದವರಿಗೆ ಮನವಿಯನ್ನು ಸಲ್ಲಿಸಿದ್ದಾರೆಯೇ?

ಶ್ರೀ ಕೆ.ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು) :

ಅ) ಬೆಳಗಾವಿ ನಗರದಲ್ಲಿ 25.60 ಕೋಟಿ ರೂಪಾಯಿಗಳ ನೀರು ಸರಬರಾಜು ಯೋಜನೆಗೆ ಆಡಳಿತಾತ್ಮಕ ಮಂಜೂರಾತಿ ನೀಡಲಾಗಿದೆ.

ಆ) ಪ್ರಶ್ನೆ ಉದ್ಭವಿಸುವುದಿಲ್ಲ.

ಬೆಳಗಾವಿ ಮಹಾನಗರ ಪಾಲಿಕೆಯ ಮೇಲಿನ ಮರಾಠಿ ಧ್ವಜ ತೆಗೆಯುವುದು.

2618 - ಶ್ರೀ ವಾಟಾಳ್ ನಾಗರಾಜ, (ಚಾಮರಾಜನಗರ) : ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾವಿಯ ಮಹಾನಗರ ಪಾಲಿಕೆಯ ಮೇಲಿನ ಮರಾಠಿ ಧ್ವಜವನ್ನು ತೆಗೆಯುವ ಬಗ್ಗೆ ಸರ್ಕಾರದವರು ಮಸೂದೆಯನ್ನು ಮಾಡಿದ್ದರೂ ಇದುವರೆವಿಗೂ ಅಲ್ಲಿನ ಧ್ವಜವನ್ನು ತೆಗೆಸುವ ಬಗ್ಗೆ ಕ್ರಮ ಕೈಗೊಳ್ಳದಿರಲು ಕಾರಣವೇನು?

ಶ್ರೀ ಕೆ.ಜೆ. ಜಾರ್ಜ್ (ವಸತಿ ಮತ್ತು ನಗಾರಭಿವೃದ್ಧಿ ಸಚಿವರು) :

ಅ) ಶ್ರೀ ಡಿ.ಪಿ. ಮುತಗೇಕರ್, ಮತ್ತಿತರರು ರಾಜ್ಯದ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ: 14819/91. ಸಲ್ಲಿಸಿರುವುದರಿಂದ, ಬೆಳಗಾವಿ ನಗರಪಾಲಿಕೆಯ ಕಟ್ಟಡದ ಮೇಲೆ ಹಾರಿಸಿರುವ ಧ್ವಜವನ್ನು ತೆಗೆಯುವ ಬಗ್ಗೆ ಬೆಳಗಾಂ ನಗರ ಪಾಲಿಕೆಯು ಕ್ರಮ ತೆಗೆದುಕೊಂಡಿರುವುದಿಲ್ಲ.